**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 222/2023**

ಚಾ.ಸಾ–04, ಪ್ರಾ.ಸಾ–03

| | | |
|---|---|---|
| ಹೆಸರು | : | ಮೋಹನ್‌ಕುಮಾರ್ |
| ತಂದೆಯ ಹೆಸರು | : | ಶಿವಣ್ಣ ಎ.ಎಲ್. |
| ವಯಸ್ಸು | : | 32 ವರ್ಷ |
| ವೃತ್ತಿ | : | ಗುತ್ತಿಗೆದಾರ |
| ವಾಸ | : | ಕೆ.ಹೆಚ್.ಬಿ. ಕಾಲೋನಿ, ತಿ.ನರಸೀಪುರ ಪಟ್ಟಣ. |

**ದಿನಾಂಕ 04.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಸುಮಾರು ಎರಡು ವರ್ಷಗಳ ಹಿಂದೆ ತಿ. ನರಸೀಪುರ ಪಟ್ಟಣದ ಕೆ.ಹೆಚ್.ಬಿ. ಕಾಲೋನಿಯಲ್ಲಿ ಕಳವು ಆಗಿದ್ದರ ಸಂಬಂಧ ಪೊಲೀಸರು ಮಂಜ ಎಂಬ ಹೆಸರಿನ ಆರೋಪಿತನನ್ನು ಆ ಕಾಲೋನಿಯಲ್ಲಿರುವ ವಿನಾಯಕ ಪ್ರಾವಿಜನ್ ಸ್ಟೋರ್ ಬಳಿ ಕರೆದುಕೊಂಡು ಬಂದಿದ್ದು, ಆ ವೇಳೆಗೆ ಪೊಲೀಸರು ಪಂಚನಾಮ ಜರುಗಿಸಿ ನನ್ನ ಸಹಿ ಪಡೆದಿರುತ್ತಾರೆ. ಆ ವೇಳೆಗೆ ಪೊಲೀಸರು ಭಾವಚಿತ್ರವನ್ನು ತೆಗೆದಿರುತ್ತಾರೆ.

ಆ ಪಂಚನಾಮ ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ.3 ಮತ್ತು 3(ಎ) ಎಂದು ಗುರುತಿಸಲಾಯಿತು.

ಸದರಿ ಭಾವಚಿತ್ರ ಮತ್ತು ಅದರ ಸಿ.ಡಿ.ಯನ್ನು ಈಗ ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ.4 ಮತ್ತು 5 ಎಂದು ಗುರುತಿಸಲಾಯಿತು.

ಸದರಿ ಮಂಜ ಎನ್ನುವ ಆರೋಪಿತನನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ. ಬಹಳ ದಿನಗಳಾಗಿರುವುದರಿಂದ ಆತನನ್ನು ಗುರುತಿಸಲು ಕಷ್ಟ ಸಾಧ್ಯ.

**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಭಾಗಶ: ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಭಾಗಶ: ಪಾಟೀ ಸವಾಲು ಮಾಡಲು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಭಾಗಶ: ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರ ಕೋರಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಭಾಗಶ: ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

ದಿನಾಂಕ 21.02.2023 ರಂದು ಮಧ್ಯಾಹ್ನ 3 ರಿಂದ ಸಂಜೆ 4.00 ಗಂಟೆ ಸಮಯದಲ್ಲಿ ನಿಪಿ.3 ರಂತೆ ಜರುಗಿಸಲಾಯಿತು ಎಂದರೆ ಸರಿ. ಆ ವೇಳೆಗೆ ಚಾಸಾ-5 ರವರು ನನ್ನ ಜೊತೆ ಇದ್ದರು ಎಂದರೆ, ನನ್ನ ಜೊತೆ ಒಬ್ಬರು ಇದ್ದು ಅವರ ಹೆಸರು ನೆನಪಿಲ್ಲ.

**ಪಾಟೀ ಸವಾಲುಃ ಶ್ರೀ ಎಂ.ಆರ್. ಆರೋಪಿತರ ಪರ ವಕೀಲರಿಂದ**

ಪೊಲೀಸರು ನನಗೆ ಪಂಚನಾಮಕ್ಕೆ ಬರುವಂತೆ ನೋಟೀಸ್ ನೀಡಿರಲಿಲ್ಲ. ಈ ದಿನ ನ್ಯಾಯಾಲಯದಲ್ಲಿ ಇರುವ ಕಬ್ಬಾಳ್ ಎಂಬ ಆರೋಪಿತನನ್ನು ಪಂಚನಾಮದ ವೇಳೆಗೆ ನೋಡಿರಲಿಲ್ಲ. ಈ ಮೇಲೆ ಹೇಳಿದ ಮಂಜ ಎಂಬ ಆರೋಪಿತನನ್ನು ನೋಡಿದರೆ ಗುರುತಿಸಲಾಗುವುದಿಲ್ಲ ಎಂದರೆ, ಕಷ್ಟ ಸಾಧ್ಯ. ಪಂಚನಾಮದ ವಿವರಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)

ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ., ತಿ.ನರಸೀಪುರ**